# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.

ದಿನಾಂಕ:21–08–2021 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:04 ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳ ಜೊತೆ ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಹೆಚ್.ಪಿ.ಸಚಿನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 2 | ಶ್ರೀ.ಜಯಪ್ರಕಾಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ |
| 3 | ಶ್ರೀ.ಕಿರಣ್.ಬಿ | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಪ್ರಾಜೆಕ್ಸ್ |
| 4 | ಶ್ರೀ.ಎನ್.ಡಿ.ಮೋಹನ್ | ಸಹಾಯಕ ಅಭಿಯಂತರರು |
| 5 | ಶ್ರೀ.ವರುಣ್‌ಕುಮಾರ್ | ಸಹಾಯಕ ಅಭಿಯಂತರರು |
| 6 | ಶ್ರೀ.ಮಲ್ಯಾದ್ರಿ | ಆರ್ಟಿಕಲ್ಚರ್ ಇನ್ಸ್‌ಪೆಕ್ಟರ್ |
| 7 | ಶ್ರೀಮತಿ.ಕೃತಿಕಾ | ಸಹಾಯಕ ಕಂದಾಯ ಅಧಿಕಾರಿ |
| 8 | ಶ್ರೀಮತಿ.ಬಿ.ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 9 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 10 | ಶ್ರೀ.ಆನಂದ್.ಎ. | ಸಹಾಯಕ ಅಭಿಯಂತರರು, ಬೆಸ್ಕಾಂ |
| 11 | ಶ್ರೀ.ವಿನಾಯಕ.ಕೆ.ಎಂ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 12 | ಶ್ರೀ.ಗೌರಿಭಟ್ | ಆರ್.ಡಬ್ಲ್ಯು.ಎ |
| 13 | ಶ್ರೀ.ವಿಜಯ್ ಕುಮಾರ್ | ಆರ್.ಡಬ್ಲ್ಯು.ಎ |
| 14 | ಶ್ರೀ.ಗೌಸ್ ಪಾಷಾ | ಎ.ಎಸ್.ಐ, ಯಲಹಂಕ ಪೋಲೀಸ್ ಠಾಣೆ |
| 15 | ಶ್ರೀ.ರಂಗೇಗೌಡ | ಆರ್.ಡಬ್ಲ್ಯು.ಎಫ್ |
| 16 | ಶ್ರೀ.ಬಿ.ಎಸ್.ಬೈರೇಗೌಡ | ಆರ್.ಡಬ್ಲ್ಯು.ಎ (ಶಾರದಾನಗರ) |
| 17 | ಶ್ರೀ.ಶೇಖರ್ | ಅರಣ್ಯ ಇಲಾಖೆ |
| 18 | ಶ್ರೀ.ಬಿ.ಆರ್.ಮೋಹನ್‌ಕುಮಾರ್ | ಆರ್.ಡಬ್ಲ್ಯು.ಎ |
| 19 | ಶ್ರೀ.ಬಿ.ಸಿ.ಶಂಕರ್ | ಆರ್.ಡಬ್ಲ್ಯು.ಎ |
| 20 | ಶ್ರೀಮತಿ.ಪದ್ಮಾ | ಆರ್.ಡಬ್ಲ್ಯು.ಎ |
| 21 | ಶ್ರೀ.ಶಿವಕುಮಾರ್ | ಆರ್.ಡಬ್ಲ್ಯು.ಎ |
| 22 | ಶ್ರೀ.ಕರುಣಾಕರಣ್‌ಶೆಟ್ಟಿ | ಆರ್.ಡಬ್ಲ್ಯು.ಎ |
| 23 | ಶ್ರೀ.ಪದ್ಮಪಾಟೀಲ್ | ಆರ್.ಡಬ್ಲ್ಯು.ಎ |
| 24 | ಶ್ರೀ.ಆರ್.ಡಿ.ಪುಟ್ಟಸ್ವಾಮಿ | ಆರ್.ಡಬ್ಲ್ಯು.ಎ |
| 25 | ಡಾ॥ಪದ್ಮಪ್ರಕಾಶ್ | ಆರ್.ಡಬ್ಲ್ಯು.ಎ |

ಸಹಾಯಕ ಅಭಿಯಂತರರು ಆದ **ಶ್ರೀ.ಡಿ.ಎನ್.ಮೋಹನ್, ಸಹಾಯಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ** ರವರು ಸಭೆಗೆ ಹಾಜರಿದ್ದು, ನೋಡಲ್ ಅಧಿಕಾರಿಗಳು ಹಾಗೂ ಭಾಗವಹಿಸಿದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ನೋಡಲ್ ಅಧಿಕಾರಿಯನ್ನು ಕೋರಿದರು.

ಶ್ರೀ.ಮನೋಜ್‌ಜೈನ್.ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು (ಯೋಜನೆ), ಬಿ.ಬಿ.ಎಂ.ಪಿ ಹಾಗೂ ಸಮಿತಿಯ ನೋಡಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ದಿನದ ಸಭೆಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿವರಣೆ ಕೇಳಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | "ಡಿ ಮಾರ್ಟ್" ಏರಿಯಾದಲ್ಲಿ ಕಾವೇರಿ ನೀರು ಸರಿಯಾದ ರೀತಿಯಲ್ಲಿ ಪೂರೈಕೆಯಾಗುತ್ತಿಲ್ಲವೆಂದು ಆರ್.ಡಬ್ಲ್ಯು.ಎ ರವರು ಕೋರಿರುತ್ತಾರೆ. | ಸದರಿ ಪ್ರದೇಶದಲ್ಲಿ ಕಾವೇರಿ ನೀರನ್ನು ಸಮರ್ಪಕವಾಗಿ ಪೂರೈಸಲು ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ. | ಸಹಾಯಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ |
| 2 | ಮಲ್ಟಿ ಸ್ಟೋರ್ ಹಿಂಬದಿ 4 ಮೀಟರ್ ವಾಲ್ವ್‌ನ್ನು 5 ಮೀಟರ್ ಮಾಡಿಕೊಡಲು ಆರ್.ಡಬ್ಲ್ಯು.ಎ ರವರು ಕೋರಿರುತ್ತಾರೆ. | ಸದರಿ ಪ್ರದೇಶದಲ್ಲಿ ಕಾವೇರಿ ನೀರನ್ನು ಸಮರ್ಪಕವಾಗಿ ಪೂರೈಸಲು ಹಾಗೂ ಬಿ.ಡಬ್ಲ್ಯು.ಎಸ್.ಎಸ್.ಬಿ ನೀರು ಪೂರೈಕೆ ಕಮಿಟಿ ರಚಿಸಲು ಸೂಚಿಸಿರುತ್ತಾರೆ. ಅದರಂತೆ 10 ಸದಸ್ಯರನ್ನೊಳಗೊಂಡಂತೆ ಕಮಿಟಿಯನ್ನು ರಚಿಸಿ ಬಿ.ಡಬ್ಲ್ಯು.ಎಸ್.ಎಸ್.ಬಿ ಸಹಾಯಕ ಅಭಿಯಂತರರು ಸಮಿತಿಯ ಕಾರ್ಯದರ್ಶಿಯಾಗಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ರವರು ಹಾಗೂ ಸಹಾಯಕ ಅಭಿಯಂತರನ್ನೊಳಗೊಂಡಂತೆ ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ. | ಸಹಾಯಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ |
| 3 | ಮಾತೃ ಬಡಾವಣೆಯಲ್ಲಿ ಮಳೆ ಬಂದಾಗ ಡಾಂಬರೀಕರಣ ಕಾಮಗಾರಿ ನಡೆಸಿರುವುದಾಗಿ ಆರ್.ಡಬ್ಲ್ಯು.ಎ ಶಂಕರ್ ರೆಡ್ಡಿಯವರ ದೂರಿನ ಬಗ್ಗೆ. | ನೋಡಲ್ ಅಧಿಕಾರಿಗಳು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರು ಸ್ಥಳ ಪರಿಶೀಲಿಸಿ ಗುಣಮಟ್ಟದ ಬಗ್ಗೆ ಖಾತರಿಯಾದ ಮೇಲೆ ಬಿಲ್ಲನ್ನು ಪಾವತಿಸಲು ಸೂಚಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪವಿಭಾಗ |
| 4 | ಕಿರಿಯ ಆರೋಗ್ಯ ಪರಿವೀಕ್ಷಕರು, ಎಸ್.ಡಬ್ಲ್ಯು.ಎಂ. ವತಿಯಿಂದ 21 ಬ್ಲಾಕ್ ಸ್ಪಾಟ್‌ಗಳಿದ್ದು, ಜನ ಸಂಖ್ಯೆ ಹೆಚ್ಚಾದ ಕಾರಣ ತಲಾ 750 ಮನೆಗೆ ಒಂದರಂತೆ ಒಟ್ಟು ಹೊಸದಾಗಿ 34 ಬ್ಲಾಕ್‌ಗಳಾಗಿ ವಿಂಗಡಿಸಿ ಅನುಮೋದನೆ ಪಡೆಯಲು ವಾರ್ಡ್ ಸದಸ್ಯರು ಸಮಿತಿಯಲ್ಲಿ ಪ್ರಸ್ತಾಪಿಸಿರುತ್ತಾರೆ. | ನೋಡಲ್ ಅಧಿಕಾರಿಗಳು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿರುವ ಬ್ಲಾಕ್ 34 ರಂತೆ ಅನುಮೋದನೆ ಪಡೆಯಲು ತಿಳಿಸಿರುತ್ತಾರೆ. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ಯ.ಉ.ಉ.ವಿಭಾಗ |

| | | | |
|---|---|---|---|
| | ಒಣಕಸಕ್ಕೆ ಈಗಾಗಲೇ 5 ವಾಹನಗಳು ಇದ್ದು, ಮನೆಗಳು ಹೆಚ್ಚುವರಿಯಾಗಿ ಒಣಕಸ ಸಂಗ್ರಹಣೆ ಜಾಸ್ತಿಯಾಗಿ ರುವುದರಿಂದ ಹೆಚ್ಚುವರಿ 3 ವಾಹನಗಳನ್ನು ಅನುಮೋದನೆ ಪಡೆಯಲು ಸಭೆಯಲ್ಲಿ ತೀರ್ಮಾನಿಸಲಾಯತು. | | |
| 5 | ಅಟ್ಟೂರು, ಬಿ.ಬಿ.ಎಂ.ಪಿ ಹತ್ತಿರ ಇರುವ ಪಾರ್ಕ್‌ನಲ್ಲಿ ಜಾಲರೆ ದುರಸ್ಥಿಯಲ್ಲಿ ಇರುವುದನ್ನು ಸರಿಪಡಿಸಿಕೊಡಲು ಪದ್ಮಪಾಟೀಲ್ ರವರು ಕೋರಿರುತ್ತಾರೆ. | ನೋಡಲ್ ಅಧಿಕಾರಿಯವರು ಜಾಲರೆಯನ್ನು ಸರಿಪಡಿಸಲು ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರವರಿಗೆ ಸರಿಪಡಿಸಲು ಸೂಚಿಸಿರುತ್ತಾರೆ. | ಕಾರ್ಯಪಾಲಕ ಅಭಿಯಂತರರು ಯೋಜನೆ |
| 6 | ಮರಗಳು ಗೆದ್ದಲು ಹಿಡಿಯುತ್ತಿರುವುದರಿಂದ ಮರಗಳಿಗೆ ಸಂರಕ್ಷಿಸಲು ಆರ್.ಡಬ್ಲ್ಯೂ.ಎ ರವರು ಆಕ್ಷೇಪಣೆ ವ್ಯಕ್ತಪಡಿಸಿದರು. | ನೋಡಲ್ ಅಧಿಕಾರಿಯವರು ಅರಣ್ಯ ಇಲಾಖೆಯವರಿಗೆ ಟರ್ಮೇಟ್ ಪೆಸ್ಟಿಸೈಡ್ ಪೌಡರ್ ಸಿಂಪಡಿಸಲು ತಿಳಿಸಿರುತ್ತಾರೆ. | ಅರಣ್ಯ ಇಲಾಖೆ |
| 7 | ಪದ್ಮಪಾಟೀಲ್ ಆರ್.ಡಬ್ಲ್ಯೂ.ಎ ರವರು ಕೋವಿಡ್-19 ರ ಬಗ್ಗೆ ಡಾ॥ಪ್ರದ್ಮ ಪ್ರಕಾಶ್ ರವರ ಮಾರ್ಗದರ್ಶನದಲ್ಲಿ ಜನಜಾಗೃತಿ ಮೂಡಿಸಿ ಜನರಿಗೆ ಆತ್ಮ ಸ್ಥೈರ್ಯ ಹಾಗೂ ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲು ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸುವ ಬಗ್ಗೆ. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ರವರ ಸಹಾಯದೊಂದಿಗೆ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲು ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪವಿಭಾಗ |
| 8 | 2021-22ನೇ ಸಾಲಿನ ಪಿ.ಓ.ಡಬ್ಲ್ಯೂ. ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಲು ಕೋರಲಾಯಿತು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಪ್ರಸ್ತಾಪಿಸಿ ಅನುಮೋದನೆ ನೀಡಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪವಿಭಾಗ |

ಶ್ರೀ.ಡಿ.ಎನ್.ಮೋಹನ್
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ:04

ಶ್ರೀ.ಮನೋಜ್‌ಜೈನ್. ಐ.ಎ.ಎಸ್
ಮಾನ್ಯ ವಿಶೇಷ ಆಯುಕ್ತರು (ಯೋಜನೆ)
ಹಾಗೂ ನೋಡಲ್ ಅಧಿಕಾರಿಗಳು.

ಪ್ರತಿಯನ್ನು:-

1) ಮಾನ್ಯ ಜಂಟಿ ಆಯುಕ್ತರು ಬಿ.ಬಿ.ಎಂ.ಪಿ, ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ / ಯೋಜನಾ ವಿಭಾಗ / ರಸ್ತೆ ಮೂಲಭೂತ ಸೌಕರ್ಯ / ಕೆರೆ ಅಭಿವೃದ್ದಿ / ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಕೋಶ, ವಾರ್ಡ್ ನಂ:04 ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ / ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪನಗರ ರವರ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.